‘ನಾಟಕ ಪ್ರಕಾರ ಯಾವುದೇ ಇರಲಿ, ಕಸುಬುದಾರಿಕೆ ಕೊರತೆ ಮಾತ್ರ ನಾಟಕದಲ್ಲಿ ಕಾಣಿಸಲೇಬಾರದು. ನಾಟಕ ಒಂದು ಚಟವಾಗಬೇಕು, ಚಟವನ್ನು ತೀರಿಸಿಕೊಳ್ಳುವ ಹಟ ಇರಬೇಕು. ಹಟವಿದ್ದರೇ ಆಟ, ನಾಟಕ.’

ಹಟತೊಟ್ಟೇ ತಮ್ಮ ಎಂಬತ್ತಾರು ವರ್ಷದ ತುಂಬು ಜೀವನದಲ್ಲಿ, ಎಪ್ಪತ್ತು ವರ್ಷಗಳಿಗೂ ಅಧಿಕ ಕಾಲ ರಂಗದ ಮೇಲೆ ಕಾಲ ಕಳೆದವರು ವಿ. ರಾಮಮೂರ್ತಿ. ರಂಗತಜ್ಞರಿಂದ ಅಂತರರಾಷ್ಟ್ರೀಯ ಬೆಳಕು ತಜ್ಞ ಎಂಬ ಅಭಿಮಾನದ ಬಣ್ಣನೆಗೊಳಗಾಗಿರುವ ರಾಮಮೂರ್ತಿ ಬೆಳಕುತಜ್ಞ ಮಾತ್ರವಲ್ಲ, ನಿರ್ದೇಶಕ, ರಾಗ ಸಂಯೋಜಕ, ಮೂಕಾಭಿನಯ ಪಟು, ಧ್ವನಿತಜ್ಞರೂ ಹೌದು. ರಂಗಸಜ್ಜಿಕೆ, ಪ್ರಸಾಧನದಲ್ಲೂ ಎತ್ತಿದ ಕೈ. ಈ ಎಲ್ಲ ಬಹುರೂಪಿ ಪ್ರತಿಭೆ ಒಂದು ತೂಕವಾದರೆ; ಬೆಳಕಿನ ವಿನ್ಯಾಸದ ಅವರ ಕ್ರಿಯಾಶೀಲತೆ ಮತ್ತೊಂದು ತೂಕ. ದೇಶದ ಐವತ್ತಕ್ಕೂ ಹೆಚ್ಚು ರಂಗಮಂದಿರಗಳ ಬೆಳಕು, ಧ್ವನಿ ವ್ಯವಸ್ಥೆ ರೂಪಿಸಿದ ವಾಸ್ತುಶಿಲ್ಪಿ ಅವರು. ರವೀಂದ್ರ ಕಲಾಕ್ಷೇತ್ರ ಸೇರಿದಂತೆ ಬೆಂಗಳೂರಿನ ಇಪ್ಪತ್ತಕ್ಕೂ ಹೆಚ್ಚು ರಂಗಮಂದಿರಗಳ ಬೆಳಕಿನ ನಿರ್ಮಾತೃ ಅವರು. ಪ್ರಾಯೋಗಿಕ ಅಲ್ಲ ಎಂಬ ಕಾರಣಕ್ಕೆ ಕೆಲವು ಕಲಾಕ್ಷೇತ್ರಗಳಲ್ಲಿ ಅವರ ಒಂದೆರಡು ಸಲಹೆಗಳನ್ನು ಕೈಬಿಟ್ಟಿರಬಹುದಾದರೂ, ಮೂಲಪುರುಷನಂತೆ ನಿಂತು ಬೆಳಕನ್ನು ಸರಿಯಾಗಿ ಹರಿಸಿದ ಭಗೀರಥ ಅವರು.

ಬೆಂಗಳೂರಿನಲ್ಲಿ ಸಂಸ್ಕೃತ ಹಾಗೂ ತೆಲುಗು ಪ್ರೊಫೆಸರ್ ಆಗಿದ್ದ ವೆಲ್ಲಾಲೂರು ವೆಂಕಟಾದ್ರಿ ಶರ್ಮ ಹಾಗೂ ವಿ.ಪದ್ಮಾವತಮ್ಮ ದಂಪತಿಯ ಏಳು ಜನ ಮಕ್ಕಳಲ್ಲಿ ನಾಲ್ಕನೆಯವರಾಗಿ 1935ರಲ್ಲಿ ಜನಿಸಿದ ರಾಮಮೂರ್ತಿ, ಬೆಳೆದದ್ದು ಆಂದೋಲನ ರೂಪದಲ್ಲಿ ಮೂಡಿಬರುತ್ತಿದ್ದ ‘ತಾಯಿನಾಡು’, ‘ವಿಶ್ವಕರ್ನಾಟಕ’ ಮುಂತಾದ ಕನ್ನಡ ಪತ್ರಿಕೆಗಳನ್ನು ‘ಓದುವ’ ಹಾಗೂ ನಿರಂತರ ನಾಟಕಗಳನ್ನು ‘ನೋಡುವ’ ಪರಿಸರದಲ್ಲಿ.

ಪ್ರೊ. ಎಂ.ಎಸ್. ನಾಗರಾಜ್, ಬಿ. ರೇವಣ್ಣ, ಎಸ್. ಶ್ರೀನಿವಾಸರಾವ್, ಪ್ರೊ. ಪಾರ್ಥಸಾರಥಿ ಹಾಗೂ ಎ. ರಾಮರಾವ್ ಅವರ ನಾಟಕದ ಗುರುಗಳು. ಗುಬ್ಬಿ ಕಂಪನಿ ಥಿಯೇಟರ್‌ನಲ್ಲಿ ನಿರಂತರ ನಾಟಕ ಪ್ರದರ್ಶನ ಇರುತ್ತಿದ್ದವು. ಜತೆಗೆ ಶೇಷಾದ್ರಿಪುರದ ಆರ್ಯ ಈಡಿಗ ಸಂಘದ ಹಾಸ್ಟೆಲಿನಲ್ಲಿ ಕಲಾನಿಕೇತನದ ನಾಟಕಗಳು ಆಗಾಗ ಜರುಗುತ್ತಿದ್ದವು. ಒಂದನ್ನೂ ತಪ್ಪಿಸಿಕೊಳ್ಳದೆ ನೋಡುತ್ತಿದ್ದರು. ಅವರ ರಂಗದ ಸೃಜನಶೀಲತೆಗೆ ಇಂಬು ದೊರೆಯಲು ಈ ನೋಡುವಿಕೆಯೇ ಕಾರಣವಾಯಿತು. ಈ ಮಧ್ಯೆ 1956ರಲ್ಲಿ ಐಟಿಐ ನೌಕರರಾಗಿ ನೇಮಕವಾಗಿದ್ದು, ಅಷ್ಟೇ ಬೇಗ ಕೆಲಸ ತೊರೆದು ಮತ್ತೆ ನಾಟಕಕ್ಕೆ ಸಮರ್ಪಿಸಿಕೊಂಡದ್ದು ಅವರ ಅದುವರೆಗಿನ ಬೆಳವಣಿಗೆಯಲ್ಲಿ ತೀರಾ ಸಹಜ ಕ್ರಿಯೆಯಾಗಿಬಿಟ್ಟಿತು.

ಗೆಳೆಯರೊಂದಿಗೆ 1957ರಲ್ಲಿ ಲಲಿತ ಕಲಾನಿಕೇತನ ಸ್ಥಾಪಿಸಿ ನಟರಾಗಿ, ನೇಪಥ್ಯ ಕಲಾವಿದರಾಗಿ ತಮ್ಮನ್ನು ತೊಡಗಿಸಿಕೊಂಡರು. ಯುನೆಸ್ಕೊದ ಅಂಗವಾದ ದೆಹಲಿಯ ಭಾರತೀಯ ನಾಟ್ಯಸಂಘ ಘಟಕವು ಬೆಂಗಳೂರಿನಲ್ಲಿ ಸ್ಥಾಪಿಸಿದ ಮೈಸೂರು ಸ್ಟೇಟ್ ನಾಟ್ಯಸಂಘ ಥಿಯೇಟರ್ ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಕಗೊಂಡಿದ್ದ ರಾಮಮೂರ್ತಿ, ಅದರ ಅಧ್ಯಕ್ಷರಾದ ಶ್ರೀರಂಗ ಹಾಗೂ ಕಾರ್ಯದರ್ಶಿ ವಿಮಲಾ ರಂಗಾಚಾರ್ ಅವರನ್ನು ಮನಸಾರೆ ನೆನಪಿಸಿಕೊಂಡಿದ್ದಾರೆ. ‘ಬೆಂಗಳೂರಿಗೆ ಶ್ರೀರಂಗರ ಆಗಮನ ನಾಟಕದಲ್ಲಿ ಸಾಮಾಜಿಕತೆ ಜತೆಗೆ ತಾಂತ್ರಿಕ ಬೆಳವಣಿಗೆಗೂ ಕಾರಣವಾಯಿತು’ ಎಂದಿದ್ದಾರೆ. ಇಂಗ್ಲಿಷ್ ನಾಟಕಗಳನ್ನಾಡುವ ಬೆಂಗಳೂರು ಲಿಟಲ್ ಥಿಯೇಟರ್ (ಬಿಎಲ್‌ಟಿ) ಸ್ಥಾಪಕ ಸದಸ್ಯರ ಪೈಕಿಯೂ ರಾಮಮೂರ್ತಿ ಒಬ್ಬರು.

ರಾಮಮೂರ್ತಿ ಅವರ ಸಾಧನೆಯ ಸಾಂದ್ರ ಹಾಗೂ ಕರಾರುವಕ್ಕಾದ ಚಿತ್ರಣ ಕಟ್ಟಿಕೊಟ್ಟಿರುವ ಡಾ. ಎಚ್.ಎ. ಪಾರ್ಶ್ವನಾಥ್ ಅವರು ತಮ್ಮ ಪುಸ್ತಕದಲ್ಲಿ (ರಂಗಸಂಪನ್ನರು ಮಾಲಿಕೆ, ಪ್ರಕಟನೆ: ನಾಟಕ ಅಕಾಡೆಮಿ) ‘ಅವರ ಅನ್ವೇಷಣಾ ಪ್ರವೃತ್ತಿ, ಅಭಿನಯಾಸಕ್ತಿ ಹಾಗೂ ತಾಂತ್ರಿಕ ಪರಿಣತಿ ಬಗೆಗಿನ ಅತೀವ ಒಲವಿನಿಂದಾಗಿ ತಮ್ಮ ಬದುಕಿನ ವಿಚಕ್ಷಣಾ ಹಾದಿಯ ಆರಂಭಿಕ ಹಂತದಲ್ಲಿಯೇ ರಾಮಮೂರ್ತಿಯವರು ರಂಗಭೂಮಿಯನ್ನೇ ತಮ್ಮ ಜೀವಿತಾವಧಿಯ ಸಂಪೂರ್ಣ ಸೇವಾವೃತ್ತಿಯನ್ನಾಗಿ ಕೈಗೊಂಡು ಮುನ್ನಡೆಯಲು ಉದ್ದೇಶಿಸಿ ಮುಂದಾದರು’ ಎಂದು ವ್ಯಾಖ್ಯಾನಿಸುತ್ತಾರೆ. ರಾಮಮೂರ್ತಿ ನಂತರ ಹಿಂತಿರುಗಿ ನೋಡಿದ್ದೇ ಇಲ್ಲ. ಆನೆ ನಡೆದದ್ದೇ ದಾರಿ ಎಂಬಂತೆ ದೇಶ, ವಿದೇಶವನ್ನೆಲ್ಲ ಸುತ್ತಿದರು. ರಂಗಮಂದಿರಕ್ಕೆ ಬೆಳಕಿನ ಅಂದ ತಂದರು.

## ಅಮೆರಿಕ, ಯುರೋಪ್‌ನಲ್ಲಿ ಕಲಿಕೆ

1961ರಲ್ಲಿ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಸೇರಿ ಎರಡು ವರ್ಷ ಡಿಪ್ಲೊಮಾ, ಒಂದು ವರ್ಷ ಬೆಳಕಿನ ವಿನ್ಯಾಸದಲ್ಲಿ ವಿಶೇಷ ತರಬೇತಿ ಪಡೆದ ನಂತರ ದೆಹಲಿಯ ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಬಿ.ವಿ. ಕಾರಂತರು ದೆಹಲಿಯಲ್ಲಿ ‘ದಿಶಾಂತರ್’ ತಂಡ ಕಟ್ಟಿ ಕಾರ್ನಾಡರ ‘ಹಯವದನ’ ಪ್ರದರ್ಶಿಸಿದಾಗ ಬೆಳಕಿನ ವಿನ್ಯಾಸ ಮಾಡಿದ್ದು ಒಂದು ಆರಂಭ. ನಂತರ ಅಲ್ಲಿನ ಹಲವು ನಾಟಕಗಳಲ್ಲಿ ಧ್ವನಿವ್ಯವಸ್ಥೆ, ಬೆಳಕಿನ ವಿನ್ಯಾಸ, ರಂಗಸಜ್ಜಿಕೆ ನಿರ್ವಹಿಸಿದರು. ನಾಟಕಶಾಲೆಯ ಪ್ರಾಂಶುಪಾಲ ಇಬ್ರಾಹಿಂ ಅಲ್ಕಾಜಿ ಅವರು ವಿದ್ಯಾರ್ಥಿ ವೇತನದ ಸೌಲಭ್ಯ ನೀಡಿ ಹವಾಯ್ ವಿಶ್ವವಿದ್ಯಾಲಯದ ರಂಗತಾಂತ್ರಿಕ ತರಬೇತಿ ಶಿಬಿರಕ್ಕೆ ರಾಮಮೂರ್ತಿಯವರನ್ನು ಕಳಿಸಿಕೊಟ್ಟರು. ತರಬೇತಿ ನಂತರ ಅಮೆರಿಕ ಹಾಗೂ ಯುರೋಪ್ ಖಂಡದ ಹತ್ತು ದೇಶಗಳಲ್ಲಿ ಸುತ್ತಿ



ರಾಮಮೂರ್ತಿ ಅವರ ನಿರ್ದೇಶನದ ‘ಸಿರಿಪುರಂದರ’ ನಾಟಕದ ಒಂದು ದೃಶ್ಯ